**ಅಸಲು ದಾವ ಸಂಖ್ಯೆಃ 392/2019**
**ಪಿ .ಡಬ್ಲೂ -2**

ದಿಃ 09.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಪಾಟೀ ಸವಾಲು ಶ್ರೀ S.S.M. ರವರಿಂದಃ-**

1. ನಾನು ಯಾವುದೇ ಶಾಲಾಭ್ಯಾಸ ಮಾಡಿರುವುದಿಲ್ಲ. ನನಗೆ ಯಾವುದೇ ಭಾಷೆಯಲ್ಲಿ ಓದಲು ಬರೆಯಲು ಬರುವುದಿಲ್ಲ. ನನಗೆ 58 ವರ್ಷ ವಯಸ್ಸಾಗಿರುತ್ತದೆ. ನನಗೆ ಈ ಪ್ರಕರಣದ ದಾವಾ ಆಸ್ತಿಯ ಕುರಿತಾಗಿ ಮಾಹಿತಿ ಇರುತ್ತದೆ. ನಾನು ಹುಟ್ಟುವುದಕ್ಕಿಂತ ಮೊದಲು ದಾವಾ ಆಸ್ತಿಯ ವಿಚಾರವಾಗಿ ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ತಯಾರಿಸಲು ವಾದಿ ನಂಬರ 11 ರವರು ಮಾಹಿತಿಯನ್ನು ನೀಡಿರುತ್ತಾರೆ. ದಾವಾ ಆಸ್ತಿಯ ಕ್ಷೇತ್ರ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಸರ್ವೇ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಮೂಲ ಮಾಲೀಕರು ಗೋವಿಂದ, ಗಂಗಾರಾಮು, ಮರಿಯಪ್ಪಾ, ಬಳ್ಳಾರಿ ಹಾಗೂ ಹಣಮಂತ ಆಗಿರುತ್ತಾರೆ. ಸದರಿ ದಾವಾ ಆಸ್ತಿಯನ್ನು ಬ್ರಿಟಿಷರು ನನ್ನ ಪೂರ್ವಜರಿಗೆ ನೀಡಿದ್ದರು ಆದರೆ ಯಾವಾಗ ಅಂತಾ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನಮ್ಮ ಪೂರ್ವಜರಿಗೆ ಹೇಗೆ ಬಂತು ಎಂಬ ಕುರಿತಾಗಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಅದು ಬಾಬು ಅವರಿಗೆ ಗೊತ್ತು. ದಾವಾ ಆಸ್ತಿಯ ಉತಾರನ್ನು ಹೊರತುಪಡಿಸಿ ದಾವಾ ಆಸ್ತಿಯ ಚೆಕಬಂಧಿ, ಕ್ಷೇತ್ರ, ಇತ್ಯಾದಿ ತೋರಿಸಲು ನನ್ನ ಬಳಿ ಬೇರೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ.

2. ದಾವಾ ಆಸ್ತಿಯ ಉತಾರನಲ್ಲಿ ಎಲ್ಲ ವಾದಿಗಳು ಹೆಸರು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತಾರನಲ್ಲಿ ವಾದಿ ನಂಬರ 11 ರಿಂದ 13 ರವರ ಹೆಸರನ್ನು ಹೊರತು ಪಡಿಸಿ ಬೇರೆ ಯಾರದು ಹೆಸರು ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಅಸ್ತಿಯ ಮಾಲಿಕನಲ್ಲ ಹಾಗೂ

ನನಗೆ ಈ ದಾವೆಯನ್ನು ಹಾಕಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಅಳತೆ ಮಾಡಿರುವುದಿಲ್ಲ. ದಾವಾ ಆಸ್ತಿಯಲ್ಲಿ 8 ಗುಂಟೆ ಜಾಗ ಬಿಟ್ಟು ಬೇರೆ ಜಾಗದಲ್ಲಿ ಮನೆಗಳನ್ನು ಕಟ್ಟಲಾಗಿರುತ್ತದೆ. ದಾವಾ ಆಸ್ತಿಯಲ್ಲಿ ಸದರಿ 8 ಗುಂಟೆ ಜಾಗ ಅದರ ಯಾವ ದಿಕ್ಕಿನಲ್ಲಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನನಗೆ ಖಾಲಿ ಜಾಗ 8 ಗುಂಟೆ ಕ್ಷೇತ್ರದ ಚೆಕಬಂಧಿ ಹೇಳಲು ಬರುವುದಿಲ್ಲ. ಸದರಿ ಖಾಲಿ ಜಾಗ ತ್ರಿಕೋನ ಆಕಾರದಲ್ಲಿರುತ್ತದೆ. ದಾವಾ ಆಸ್ತಿ ಸರ್ವೇ ನಂಬರ 1009 ದಾವಾ ಆಸ್ತಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯರ ಕಬ್ಜಾದಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಯರು ಕಂಪೌಂಡ ಕಟ್ಟಿದ್ದಾರೆ ಎಂದರೆ ಸರಿ. ನಾನು ಸ್ವತಃ ಹೇಳುತ್ತೇನೆ ಸದರಿ ಜಾಗ ನಮ್ಮ ಜಾಗ ಆಗಿರುತ್ತದೆ. ಸದರಿ ಪ್ರತಿವಾದಿ ಕಂಪೌಂಡ ಹಾಕಿರುವ ಜಾಗದಲ್ಲಿ ಎಲ್ಲಾ ಕಟ್ಟಡವನ್ನು ಕಟ್ಟಿರುತ್ತಾರೆ ಎಂದರೆ ಅರ್ಧ ಕಟ್ಟಿ ಅದು ಬಂದಾಗಿರುತ್ತದೆ. ಸದರಿ ಕಂಪೌಂಡ ಗೋಡೆಯನ್ನು ಸುಮಾರು 15 ವರ್ಷಗಳ ಹಿಂದೆ ಕಟ್ಟಲಾಗಿರುತ್ತದೆ.

3. ಈಗ ನಾನು ನೋಡುತ್ತಿರುವ ದಾವಾ ಆಸ್ತಿ ಹಾಗೂ ಸುತ್ತ-ಮುತ್ತಲಿನ ಜಾಗದ ಸಂಬಂಧಿತ ಫೋಟೋಗಳಾಗಿರುತ್ತವೆ. ಸಾಕ್ಷಿಯು ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಶಾನೆ ಡಿ 1 ರಿಂದ 10 ಎಂದು ಗುರುತಿಸಲಾಯಿತು. ಪ್ರತಿವಾದಿಯರಿಗೆ ಸಿಟಿ ಕಾರ್ಪೊರೇಶನ ರವರು ರಸ್ತೆಯ ಎರಡು ಬದಿಯ ಜಾಗ 2 ಎಕರೆ 30 ಗುಂಟೆ 7 ಆಣೆಯನ್ನು ಲಿಸ್ ನ ಆಧಾರದ ಮೇಲೆ ನೀಡಿರುತ್ತಾರೆ ಎಂದರೆ ರಸ್ತೆಯ ಆಚೆಯ ಜಾಗವನ್ನು ಪ್ರತಿವಾದಿಯರಿಗೆ ನೀಡಿರುತ್ತಾರೆ ರಸ್ತೆಯ ಮತ್ತೊಂದು ಕಡೆ ನಮ್ಮ ಜಾಗ ಇರುತ್ತದೆ. ಕಾರ್ಪೊರೇಶನ ರವರು ಪ್ರತಿವಾದಿಗೆ ನೀಡಿರುವ ಲೀಸ್ ಜಾಗದಲ್ಲಿ ದಾವಾ ಆಸ್ತಿ ಜಾಗ ಸಹ ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಲೀಸ್ ನ ಮುಖಾಂತರ ನೀಡಿರುವ ಜಾಗದ

ಪೂರ್ವ ದಿಕ್ಕಿಗೆ ಖುಲ್ಲಾಜಾಗ ಇದ್ದು ಅದನ್ನು ಗ್ರಂಥಾಲಯ ಕಟ್ಟಲು ಮೀಸಲಿಟ್ಟಿರುತ್ತಾರೆ ಹಾಗೂ ಪಶ್ಚಿಮದ ದಿಕ್ಕಿನಲ್ಲಿ ಕಾಲೇಜ ಕಟ್ಟಡ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಾಲೇಜ ಕಟ್ಟಡ ಹಾಗೂ ಮುಂದೆ ಇರುವ ಖುಲ್ಲಾ ಜಾಗದ ಮಧ್ಯೆ ಒಂದು ರಸ್ತೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಖುಲ್ಲಾ ಜಾಗಕ್ಕೆ ಸಿಟಿ ಸರ್ವೇಯವರು ಸಿಟಿಎಸ್ ನಂಬರ 10586/ಬಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಜಾಗದ ಸಿ ಟಿ ಎಸ್ ನ ಉತಾರದಲ್ಲಿ ಪ್ರತಿವಾದಿಯರ ಹೆಸರು ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಾಲೇಜ ಕಟ್ಟಡ ಇರುವ ಜಾಗಕ್ಕೆ ಸಿಟಿಎಸ್ ನಂಬರ 10587/ಸಿ ಹಾಗೂ 10587/ಡಿ ಎಂದು ಕೊಟ್ಟಿರುತ್ತಾರೆ ಎಂದರೆ ಇರಬಹುದು.

4. ಈ ದಾವೆಯನ್ನು ಸಲ್ಲಿಸುವುದಕ್ಕಿಂತ ಮೊದಲು ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವಾ ನಂಬರ 902/2009 ಎಂಬ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾಖಲಿಸಿದ್ದೇನು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಸಾಕ್ಷ್ಯ ವಿಚಾರಣೆ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯ ದಾವಾ ಆಸ್ತಿ ಖುಲ್ಲಾ ಜಾಗಕ್ಕೆ ತೊಂದರೆ ನೀಡಬಾರದು ಎಂದು ಖಾಯಂ ಮನಾಯಿ ಹುಕುಂ ಕೇಳಿದ್ದೆ ಎಂದರೆ ಸರಿ. ಸದರಿ ದಾವೆ ದಿನಾಂಕ 13.02.2020 ರಂದು ನಿಖಾಲಿಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆ ಚಾಲ್ತಿಯಲ್ಲಿದ್ದಾಗ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ನಾನು ಪೂರಕ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದು ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಆದ ಆದೇಶದ ವಿರುದ್ದ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು, ಸಂಬಂಧ ಹಾಗೂ ಸಾಮಿತ್ವ ಹಾಗೂ ಕಬ್ಜಾ ಇಲ್ಲದೇ

ಇದ್ದರೂ ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**